ಶ್ರೀ ಎಂ. ವೀರಪ್ಪಮೊಯಿಲಿ :- ನಾನು ಹೇಳುವುದು ಇಂಗ್ಲಿಷ್‌ನಲ್ಲಿ ಇಲ್ಲ, ಕನ್ನಡದಲ್ಲಿ ತಮಗೆ ಕನ್ನಡ ಅರ್ಥವಾಗುತ್ತದೆ.

ಶ್ರೀ ಖಮರುಲ್ ಇಸ್ಲಾಂ :- ನನಗೆ ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ, ಆದುದರಿಂದ ನಾನು ಕನ್ನಡದಲ್ಲಿ ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ತಾವು ಈ ಉತ್ತರವನ್ನು ಇಂಗ್ಲೀಷ್‌ನಲ್ಲಿ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ :- ನಾನು ಕನ್ನಡದಲ್ಲಿ ಉತ್ತರವನ್ನು ಕೊಡುವಾಗ ತಮಗೆ ಅರ್ಥವಾಗತಕ್ಕ ಕನ್ನಡದಲ್ಲೇ ಉತ್ತರವನ್ನು ಕೊಡುತ್ತೇನೆ. ತಮಗೆ ಅರ್ಥವಾಗುವಂತೆ ಹೇಳುತ್ತೇನೆ. ಅದು ಅರ್ಥವಾಗದಿದ್ದರೆ, ಆಗ ಇಂಗ್ಲೀಷ್‌ನಲ್ಲಿ ಹೇಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ :- ಇಲ್ಲ ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲ, ಕನ್ನಡದಲ್ಲಿ ನಾನು ಭಾಷಣ ಮಾಡುತ್ತೇನೆ. ಆದರೆ; ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :- ನೀವು ಕನ್ನಡವನ್ನು ಕಲಿತರೆ ಚೆನ್ನಾಗಿರುತ್ತದೆ. ಕನ್ನಡದಷ್ಟು ಒಳ್ಳೆಯ ಸಂದರ, ಹಾಗೂ ಸರಳವಾದ ಭಾಷೆ ಬೇರೊಂದಿಲ್ಲ. ಇದು ಕಸ್ತೂರಿ ಕನ್ನಡ. ಇದೇ ದೇಶದಲ್ಲಿ ಇಡೀ ಜಗತ್ತಿನಲ್ಲಿ ಇಲ್ಲ. ಆದುದರಿಂದ ತಾವು ಕನ್ನಡವನ್ನು ಕಲಿಯಿರಿ. ಈ ಸಮಸ್ಯೆ ಇರುವುದರಿಂದ ಬಹಳ ತೊಂದರೆಯಾಗುತ್ತದೆಂದು ನಾನು ಈ ವಿಚಾರವನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಹೋಗಿ ಎಲ್ಲೆಲ್ಲಿ ರಿಸರ್ವ್ ಕೆಟಗರಿಯಲ್ಲಿ ಉರ್ದು ಟೀಚರ್ಸ್ ಇಲ್ಲ ಅಂದ ಕಡೆ ಈ ರಿಸರ್ವೇಷನ್ ಇರುವುದನ್ನು ಡೀರಿಸರ್ವ್ ಮಾಡತಕ್ಕ ನಿರ್ಣಯವನ್ನು ನಾವು ಈಗಾಗಲೇ ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡಿದ್ದೇವೆ.

ಶ್ರೀ ಖಮರುಲ್ ಇಸ್ಲಾಂ :- ಆಗಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ :- ಹೌದೂ ಆಗಿದೆ. I will have now to see that the decision of the Cabinet will be made applicable to Urdu lecturers also. ಪುನಃ ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ, ಅಥವಾ ಮೊನ್ನೆ ತೆಗೆದುಕೊಂಡಂಥ ನಿರ್ಣಯದ ಪ್ರಕಾರ ನಿಯಮಾವಳಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಇದು ಈ ತಕ್ಷಣದಿಂದಲೇ ಜಾರಿಗೆ ಬರುತ್ತದೆ. ಅಂದರೆ ಮುಂದಿನ ರಿಕ್ರೂಟ್‌ಮೆಂಟ್‌ಗೆ ಇದು ಅನ್ವಯವಾಗುತ್ತದೆ. ಲೋಕಸೇವಾ ಆಯೋಗದಲ್ಲಿ ಈ ನಿರ್ಣಯವನ್ನು ಅನ್ವಯಿಸಬೇಕಾಗುತ್ತದೆ. ಉರ್ದು ಅಥವಾ ಅರಾಬಿಕ್ ಉಪಾಧ್ಯಾಯರು ಮೀಸಲಾತಿ ವರ್ಗದಲ್ಲಿ ಸಿಕ್ಕದಿದ್ದರೆ ಆಗ ಇದನ್ನು ಸಡಲಿಸುವುದಕ್ಕೆ ತೊಂದರೆಯಾಗುವುದಿಲ್ಲ. ಮೊನ್ನೆ ತೆಗೆದುಕೊಂಡ ನಿರ್ಣಯದಲ್ಲಿ ಇದು ಅನ್ವಯವಾಗುವುದಾದರೆ ಅದು ಕ್ಯಾಬಿನೆಟ್‌ಗೆ ಹೋಗಬೇಕಾಗಿಲ್ಲ. ತಕ್ಷಣ ಜಾರಿ ಮಾಡುತ್ತೇವೆ. ಅದು ಅನ್ವಯವಾಗದಿದ್ದರೆ ಇದನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಸ್. ಎಂ. ಯಾಹ್ಯಾ :- ಮಾನ್ಯ ಮೊಯಿಲಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಇಂಟರ್‌ವ್ಯೂ ಬರಬೇಕಾದರೆ 2–3 ವರ್ಷಗಳಾಗುತ್ತವೆ. ಈಗ ನಡೆಯುತ್ತಿರುವ ಇಂಟರ್‌ವ್ಯೂನಲ್ಲಿ ಇದನ್ನು ನೀವು ಅನ್ವಯಿಸುವಂತೆ ಹೇಳದಿದ್ದರೆ ಇನ್ನೂ 2–3 ವರ್ಷಗಳವರೆಗೂ ಈ ಪೋಸ್ಟ್‌ಗಳು ಖಾಲಿ ಇರುತ್ತವೆಂದು ಹೇಳಬಯಸುತ್ತೇನೆ. ಈ ಕಾರಣದಿಂದ ಈ ನೀತಿಯನ್ನು ಈಗಲೇ ಅನ್ವಯಿಸುವಂತೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ಅದು ಈ ಸಾರಿಯ ರಿಕ್ರೂಟ್‌ಮೆಂಟ್‌ಗೇ ಅನ್ವಯವಾಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

3. ಧಾರವಾಡ ಜಿಲ್ಲಾ ಮುಂಡರಗಿ ತಾಲ್ಲೂಕಿನ ಕಲ್ಕೇರಿ ಗ್ರಾಮದಲ್ಲಿ ಜಯಶ್ರೀ ನಾಯ್ಕರ್ ಎಂಬ ವಿದ್ಯಾರ್ಥಿನಿಯ ಬೆತ್ತಲೆ ಮೆರವಣಿಗೆ.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್:- ಮಾನ್ಯ ಉಪಾಧ್ಯಕ್ಷೀಣಿಯವರೆ, ತಮ್ಮ ಮೂಲಕ ನಾನು ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ. ಧಾರವಾಡ ಜಿಲ್ಲಾ ಮುಂಡರಗಿ ತಾಲ್ಲೂಕಿನ ಕಲ್ಕೇರಿ ಗ್ರಾಮದಲ್ಲಿ ಕೆಲವು ತಿಂಗಳ ಹಿಂದೆ ಒಂದು ಅಮಾನುಷ ಕೃತ್ಯ ನಡೆಯಿತು. ಜಯಶ್ರೀ ನಾಯ್ಕರ್

ಎನ್ನತಕ್ಕ ವಿದ್ಯಾರ್ಥಿನಿಯನ್ನು ಬೆತ್ತಲೆ ಮೆರವಣಿಗೆ ಮಾಡಿದರು. ಇದರ ದ್ಯೋತಕವಾಗಿ ಆಗಿರತಕ್ಕ ಅನ್ಯಾಯವನ್ನು ಪ್ರತಿಭಟನೆ ಮಾಡುವುದಕ್ಕೆ ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣಿ ಮಾಡಿದರೂ ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಈ ಶತಮಾನದಲ್ಲಿ ನಡೆದಿರಕ್ಕ ಈ ಘಟನೆ ಏನಿದೆ ಇದು ನಿಜಕ್ಕೂ ಒಂದು ನಾಚಿಕೆಗೇಡಿನ ಪ್ರಸಂಗ. ಏಕೆಂದರೆ ಒಬ್ಬ ವಿದ್ಯಾರ್ಥಿಯನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡಿ ಆಕೆಯ ಮರ್ಮಾಂಗದಲ್ಲಿ ಯೂರಿಯ ಗೊಬ್ಬರದ ಜೊತೆಗೆ ಇನ್ನೂ ಬೇರೆ ವಸ್ತುವನ್ನು ತುರುಕಿ ಅನೇಕ ಗಾಯಗಳನ್ನು ಮಾಡಿದ್ದಾರೆ. ಆದರೂ ಕೂಡ ಸರ್ಕಾರ ಇದರ ಬಗ್ಗೆ ತನ್ನ ಗಮನವನ್ನು ಹರಿಸಿಲ್ಲ.

ಆ ಹಳ್ಳಿಯಲ್ಲಿ ಹಿರಿಯರಿದ್ದಾರೋ ಇಲ್ಲವೋ ಗೊತ್ತಿಲ್ಲ. ಆ ಮುನ್ನೂರು ಜನರು ಆ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ್ದಾರೆ. ಇವತ್ತು ಅವರ ಪರಿಸ್ಥಿತಿ ಏನಾಗಿದೆ ಎಂದರೆ ಅವರು ಅಲ್ಲಿ ವಾಸ ಮಾಡಲಿಕ್ಕೂ ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಸರ್ಕಾರದವರು ಈ ಘಟನೆಗೆ ಒಳಗಾದವರ ಪೈಕಿ ಎಷ್ಟು ಜನರನ್ನು ಹಿಡಿದಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ. ಸರ್ಕಾರ ಈ ಘಟನೆಯಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನನೊಂದು ಹೇಳುತ್ತಿದ್ದೇನೆ. ಮತ್ತೆ ಸರ್ಕಾರದವರು, ಮಾನ್ಯ ಗೃಹಮಂತ್ರಿಗಳೂ ಕೂಡಲೇ ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ನಾನು ಮನನೊಂದು ಹೇಳುತ್ತಿದ್ದೇನೆ. ಮತ್ತೆ ಸರ್ಕಾರದವರು, ಮಾನ್ಯ ಗೃಹಮಂತ್ರಿಗಳೂ ಕೂಡಲೇ ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂಥ ಘಟನೆಗಳು ರಾಜ್ಯದಲ್ಲಿ ಇನ್ನು ಮುಂದೆ ಎಲ್ಲೂ ನಡೆಯದಂತೆ ಸೂಕ್ತ ವ್ಯವಸ್ಥೆಯನ್ನು ಕೂಡ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅವರಿಗೆ ಅಲ್ಲಿ ಇರಲಿಕ್ಕೆ ವಾಸ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೇರೆ ಕಡೆ ವ್ಯವಸ್ಥೆಯನ್ನು ಮಾಡಬೇಕು, ಆ ವಿದ್ಯಾರ್ಥಿಗೆ ಕೆಲಸವನ್ನು ಕೊಡತಕ್ಕಂಥ ಕಾರ್ಯವನ್ನು ಮಾನ್ಯ ಗೃಹಮಂತ್ರಿಗಳು ಮಾಡುವುದರ ಜೊತೆಗೆ ಅವರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು. ಕೊಡದೆ ಹೋದರೆ ತಮ್ಮ ಮುಖೇನ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ ಮತ್ತು ಉಗ್ರವಾದ ಹೋರಾಟ ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಧರ್ಮಸಿಂಗ್ :- ಮಾನ್ಯ ಸದಸ್ಯರಾದ ಜುಟ್ಟಲ್‌ರವರು ಬಹಳವಾಗಿ ಈ ಘಟನೆಯಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಾಲಕಿಯ ಮೇಲೆ ಅತ್ಯಾಚಾರ ನಡೆದಿರುವ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಗೂ ಖಂಡನೆ ಮಾಡಿದ್ದಾರೆ. ಬಳ್ಳಾರಿಯ ನಾಯಕ ಜನಾಂಗದ ವಿದ್ಯಾರ್ಥಿಯ ಬಗ್ಗೆ ಜನರು ಬಂದು ಕ್ಷಮ ಕ್ಷಮ ಭೇಟಿ ಕೊಟ್ಟಿದ್ದಾರೆ. ಶಾಸಕರು ಕೂಡ ಮಾನ್ಯ ಮುಖ್ಯಮಂತ್ರಿಗಳಲ್ಲಿಗೆ ಹೋಗಿ ಹೇಳಿದಾಗ ಅವರು ನನಗೆ ಹೋಗಲಿಕ್ಕೆ ಆಗುವುದಿಲ್ಲವಾದ್ದರಿಂದ, ನನಗೆ ಸ್ಥಳಕ್ಕೆ ಹೋಗಲಿಕ್ಕೆ ಹೇಳಿದ್ದರು. ನಾನೂ ಕೂಡ ಖುದ್ದಾಗಿ ಅವರ ಜೊತೆಗೆ ಭೇಟಿಯಾಗಿದ್ದೇನೆ. ಇದರ ಬಗ್ಗೆ ಒಂದು ನಿಸ್ಪಕ್ಷಪಾತವಾದ ರೀತಿಯಲ್ಲಿ ತನಿಖೆಯಾಗಬೇಕೆಂದು ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಅಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಹೋಗಿಬಂದಿದ್ದಾರೆ. ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಉಪವಾಸ ಸತ್ಯಾಗ್ರಹ ಮಾಡಿದಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಮಾತನಾಡಿ ಈಗಾಗಲೇ ಸರ್ಕಾರ ಸಿ.ಐ.ಡಿ. ತನಿಖೆಗೆ ವಹಿಸಿಕೊಟ್ಟಿದೆ. ಪರೀಕರಪ್ಪ ಪಾಟೀಲ್ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಅವರನ್ನು ಬೇಲ್ ಮೇಲೆ ಬಿಟ್ಟಿದ್ದಾರೆ. ಈ ಸದನದಲ್ಲಿ ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತಿದ್ದೇನೆ, ಅತ್ಯಾಚಾರ ನಡೆದ ಬಗ್ಗೆ ಸಿ.ಐ.ಡಿ. ತನಿಖೆಯ ವರದಿ ಬರುತ್ತದೆ. ತಪ್ಪಿತಸ್ಥರು ಯಾರೇ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಮಾನ್ಯ ಸದಸ್ಯರಾದ ಅವರ ಜುಟ್ಟಾಳ್‌ರವರು ರಿಹ್ಯಾಬಿಟೇಷನ್ ಮಾಡುವ ಬಗ್ಗೆ ಖುದ್ದಾಗಿ ಮಾತನಾಡಿದ್ದಾರೆ. ಅದನ್ನು ಕೂಡ ಮಾಡುತ್ತೇನೆಂದು ನಾನು ಸರ್ಕಾರದ ವತಿಯಿಂದ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೇ ಪೂರಕವಾಗಿ ಮಾನ್ಯ ಗೃಹ ಸಚಿವರು ಹೇಳಿರುತ್ತಾರೆ. ಯಾರು ವಿದ್ಯಾರ್ಥಿ ಇದ್ದಾರೋ ಅವರಿಗೆ ಕೆಲಸವನ್ನು ಕೊಡುವುದೇ ಅಲ್ಲ. ವಿದ್ಯಾರ್ಥಿನಿಯ ಮೇಲೆ ದೌರ್ಜನ್ಯ ನಡೆದ ವರ್ತಮಾನ ಬಂದಮೇಲೆ ನನ್ನ ಜೊತೆಯಲ್ಲಿ

ಮಾತನಾಡಿದ್ದಾರೆ. ದೌರ್ಜನ್ಯ ನಡೆದಂಥ ವಿದ್ಯಾರ್ಥಿಗೆ ಅವರು ಮೇಲ್ ಮಟ್ಟದಲ್ಲಿ ಎಲ್ಲಿಯವರೆಗೆ ಕಲಿಯಲಿದ್ದಾರೋ ಅಲ್ಲಿಯವರೆಗೆ ಆಗತಕ್ಕಂಥ ಖರ್ಚು, ಪಾಕೆಟ್ ಮನಿಯನ್ನು ಸರ್ಕಾರವೇ ಕೊಡಬೇಕೆಂದು ಶಿಕ್ಷಣ ಇಲಾಖೆಯವರು ನಿರ್ಣಯವನ್ನು ತೆಗೆದುಕೊಂಡು ಆಜ್ಞೆಯನ್ನೂ ಕೂಡ ಹೊರಡಿಸಲಿದ್ದಾರೆಂದು ತಿಳಿಸಲು ಇಚ್ಛಿಪಡುತ್ತೇನೆ.

ಶ್ರೀ ಜಿ.ಹೆಚ್. ಜುಟ್ಟಾಳ್ :- ಮಾನ್ಯ ಅಧ್ಯಕ್ಷರೇ ಸರ್ಕಾರ ಏನು ನಿರ್ಧಾರ ತೆಗೆದುಕೊಂಡಿದೆ, ನಾನು ಅದನ್ನು ಸ್ವಾಗತ ಮಾಡುತ್ತೇನೆ.

ನಿಯಮ - 334 ರ ಮೇರೆಗೆ

1. ಬೆಂಗಳೂರು ನಗರದ ಪ್ರಕಾಶನಗರದಲ್ಲಿ ರೌಡಿಗಳ ಗುಂಪು ಘರ್ಷಣೆಗಳಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ನಿವಾರಣೆ.

ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) :- ಸನ್ಮಾನ್ಯ ಉಪಾಧ್ಯಕ್ಷರೆಯವರೇ, ಬೆಂಗಳೂರು ನಗರದ ಪ್ರಕಾಶ್ ನಗರದಲ್ಲಿ ಇತ್ತೀಚೆಗೆ ರೌಡಿಗಳ ಗುಂಪು ಘರ್ಷಣೆಗಳು ಹೆಚ್ಚಿದ್ದು ಇದರಿಂದ ಈ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ರಾತ್ರಿಯ ಸಮಯದಲ್ಲಿ ನಡುರಸ್ತೆಯಲ್ಲೇ ಗುಂಪು ಘರ್ಷಣೆಗಳು ಪ್ರಾರಂಭವಾಗುತ್ತಿದ್ದು ಸಾರ್ವಜನಿಕರು ರಸ್ತೆಯಲ್ಲಿ ತಿರುಗಾಡಲೂ ಸಹ ಆಗದ ಪರಿಸ್ಥಿತಿ ಇದೆ. ರಾತ್ರಿಯ ವೇಳೆಯಲ್ಲಿ ಭಯವಿಲ್ಲದೆ ನಿದ್ದೆ ಮಾಡಲೂ ಸಹ ಆಗುತ್ತಿಲ್ಲ. ಈ ಪ್ರದೇಶದಲ್ಲಿ ಪೋಲೀಸ್ ಗಸ್ತಿನ ವ್ಯವಸ್ಥೆಯನ್ನು ಹೆಚ್ಚಿಸಬೇಕು ಮತ್ತು ಪೋಲೀಸ್ ಮೊಬೈಲ್ ವಾಹನಗಳ ಓಡಾಟವನ್ನು ಹೆಚ್ಚಿಸಿ ಸಾರ್ವಜನಿಕರಿಗೆ ಉಂಟಾಗಿರುವ ಭಯ ಮತ್ತು ತೊಂದರೆಯನ್ನು ನಿವಾರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯಗೃಹ ಸಚಿವರಲ್ಲಿ ಏನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :- ಸನ್ಮಾನ್ಯ ಉಪಾಧ್ಯಕ್ಷರೆಯವರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಂಗಳೂರಿನ ಪ್ರಕಾಶ ನಗರ ರಾಜಾಜಿನಗರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುತ್ತದೆ.

ಇತ್ತೀಚೆಗೆ ಪ್ರಕಾಶ ನಗರದ ವ್ಯಾಪ್ತಿಯಲ್ಲಿ ಟಪ್ಪು ಮತ್ತು ಅತನ ಸಂಗಡಿಗರು ಎರಡು ಕೃತ್ಯಗಳಲ್ಲಿ ಭಾಗವಹಿಸಿರುತ್ತಾರೆ. ದಿನಾಂಕ 24.2.1992 ರಂದು ರಾತ್ರಿ 11.55 ಘಂಟೆಗೆ ಟಪ್ಪು ಹಾಗೂ ಸಂಗಡಿಗರು ಮುರಳಿ ಎಂಬ ವ್ಯಕ್ತಿಗೆ ಚಾಕುವಿನಿಂದ ಹೊಡೆದು ಪರಾರಿಯಾಗಿರುತ್ತಾನೆ. ಈ ಬಗ್ಗೆ ರಾಜಾಜಿನಗರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ 75.92 ಕಲಂ 324 ಭಾ.ದಂ.ಸಂ.ಪ್ರಕಾರ ದಾಖಲಾಗಿರುತ್ತದೆ. ಅದೇ ದಿವಸ ಸಿ.ಎಂ. ವೆಂಕಟೇಶ್ ಎಂಬ ವ್ಯಕ್ತಿಗೆ ಸಹಾ ಗಾಯ ಮಾಡಿರುತ್ತಾರೆ. ಈ ಬಗ್ಗೆ ಸಹಾ ರಾಜಾಜಿನಗರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ 77.92 ಕಲಂ 324 ಭಾ.ದಂ.ಸಂ. ರೆ: ವಿ 34 ಭಾ.ದಂ.ಸಂ. ಪ್ರಕಾರ ದಾಖಲಾಗಿರುತ್ತದೆ. ಈ ಎರಡೂ ಮೊಕದ್ದಮೆಗಳು ಪ್ರಕಾಶನಗರದಲ್ಲಿ ಇತ್ತೀಚೆಗೆ ನಡೆದಿರುತ್ತದೆ. ಈ ಗಲಾಟೆಗಳಿಗೆ ಕಾರಣರಾದ ವ್ಯಕ್ತಿಗಳನ್ನು ಈಗಾಗಲೇ ಗುರ್ತಿಸಿ ಬಂಧಿಸಲಾಗಿದೆ. ಈ ವ್ಯಕ್ತಿಗಳು ಇತ್ತೀಚೆಗೆ ಮಾತ್ರ ಇಂತಹ ಕೃತ್ಯಗಳಲ್ಲಿ ತೊಡಗಿದ್ದು, ಅವರುಗಳನ್ನು ಸಂಪೂರ್ಣವಾಗಿ ಕಾನೂನಿನ ಚೌಕಟ್ಟಿನಲ್ಲಿ ತಹಬಂದಿಗೆ ತರಲಾಗುತ್ತದೆ.

ಮೇಲೆ ತಿಳಿಸಿದ ಎರಡು ಕೃತ್ಯಗಳ ಹೊರತು ರೌಡಿ ಗುಂಪುಗಳ ನಡುವೆ ಯಾವುದೇ ಘರ್ಷಣೆ ಪ್ರಕಾಶ ನಗರ ವ್ಯಾಪ್ತಿಯಲ್ಲಿ ನಡೆದಿರುವುದಿಲ್ಲ.

ಪ್ರಕಾಶ ನಗರದಲ್ಲಿ ಸತತವಾಗಿ ಒಂದು ಸಿ.ಎ.ಆರ್. ತುಕಡಿ (ಸಶಸ್ತ್ರ ಪೋಲೀಸ್ ಪಡೆ) ಕರ್ತವ್ಯದ ಮೇಲಿರುತ್ತದೆ ಹಾಗೂ ಗಸ್ತು ವ್ಯವಸ್ಥೆಯನ್ನು ತೀವ್ರಗೊಳಿಸಲಾಗಿದ್ದು, ಪ್ರತಿಗಳಲ್ಲಿ ಹಾಗೂ ಬೀದಿಗಳಲ್ಲಿರುವ ಕೆಟ್ಟ ,ಚಾರಿತ್ರ್ಯ ಮತ್ತು ಸಂಶಯಾಸ್ಪದ ವ್ಯಕ್ತಿಗಳ ಪಟ್ಟಿ ಮಾಡಿ ಅವರ ಚಲನವಲನಗಳನ್ನು ಗಮನಿಸುವ ಕೆಲಸವನ್ನು ಸಹಾ ಮಾಡಲಾಗಿದೆ. ಸಮಯಕ್ಕೆ ಸರಿಯಾಗಿ ಮದ್ಯ ಹಾಗೂ ಇತರ ಅಂಗಡಿಗಳನ್ನು ಮುಚ್ಚಿಸಿ ರಾಜಾಜಿನಗರ ಪೋಲೀಸ್ ಇನ್‌ಸ್ಪೆಕ್ಟರ್ ಅವರ ನೇತೃತ್ವದಲ್ಲಿ ಸಿಬ್ಬಂದಿ ವರ್ಗ ಗಸ್ತು ತಿರುಗುತ್ತಿರುತ್ತಾರೆ.